ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ

KARNATAKA SKILL DEVELOPMENT CORPORATION

SANKALP
Ministry of Skill Development & Entrepreneurship

LSC Logistics Skill Council

# ಮಾದರಿ ಪಠ್ಯಕ್ರಮ

# MODEL CURRICULUM

## ಸರಕು ಸಾಗಣೆ ಟ್ರ್ಯಾಕಿಂಗ್ ಕಾರ್ಯನಿರ್ವಾಹಕ

## Consignment Tracking Executive

**ಡಾ: ಅಶ್ವಥ್ ನಾರಾಯಣ ಸಿ.ಎನ್.**
ಉನ್ನತ ಶಿಕ್ಷಣ, ಐಟಿ–ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ, ಮತ್ತು ಕೌಶಲ್ಯಾಭಿವೃದ್ಧಿ,
ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರು
ಮತ್ತು ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರು

ಕೊಠಡಿ ಸಂಖ್ಯೆ 242–243
2ನೇ ಮಹಡಿ, ವಿಕಾಸಸೌಧ
ಬೆಂಗಳೂರು – 560 001
ದೂರವಾಣಿ ಸಂಖ್ಯೆ : 080–22258965
: 080–22034647

ಸಂಖ್ಯೆ:ಉಶಿ,ಐಟಿ&ಬಿಟಿ,ವಿ&ತಂ,ಕೌಅಸ/1016 /2021–22

ದಿನಾಂಕ: 14. 06. 2022

## ಶುಭ ಸಂದೇಶ

ಕರ್ನಾಟಕ ಸರ್ಕಾರ ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಮಹಾತ್ವಾಕಾಂಕ್ಷೆಯ ಯೋಜನೆಯಾದ ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆಯಡಿಯಲ್ಲಿ (CMKKY) ಒಂದು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು, ನೂರಕ್ಕೂ ಅಧಿಕ ಉದ್ಯೋಗ ಪಾತ್ರಗಳು(job role) ತರಬೇತಿ ಪಡೆಯುತ್ತಿದ್ದಾರೆ. ಈ ಯೋಜನೆಯ ಪೂರ್ಣ ಫಲವನ್ನು ರಾಜ್ಯದ ಯುವಜನತೆಗೆ ತಲುಪಿಸುವ ಮಹತ್ತರ ಕಾರ್ಯಕ್ಕೆ ಸರ್ಕಾರವು ಮುಂದಾಗಿದೆ. ಈ ನಿಟ್ಟಿನಲ್ಲಿ ವಿಶ್ವಬ್ಯಾಂಕ್ ಪ್ರಾಯೋಜಿತ ಸಂಕಲ್ಪ (SANKALP) ಯೋಜನೆಯಡಿ ಸುಮಾರು 70 ಬೇಡಿಕೆಯಲ್ಲಿರುವ ಹಾಗೂ CMKKY ಯೋಜನೆಯಡಿ ಅಳವಡಿಸಿಕೊಂಡಿರುವ ಉದ್ಯೋಗ ಪಾತ್ರಗಳು (job role) ಪಠ್ಯಕ್ರಮವನ್ನು ಕನ್ನಡಕ್ಕೆ ಅನುವಾದಿಸಲಾಗಿದೆ. ಮಾತೃ ಭಾಷೆಗೆ ಅನುವಾದಗೊಂಡ ಈ ಪಠ್ಯಕ್ರಮವು ನಮ್ಮ ಕರ್ನಾಟಕದ ಯುವಶಕ್ತಿಯನ್ನು, ಅದರಲ್ಲೂ ಗ್ರಾಮೀಣ ಭಾಗದ ಯುವಜನರ ಕೌಶಲ್ಯತೆಯನ್ನ ವೃದ್ಧಿಸಿ, ಅವರ ಸರ್ವೋತೋಮುಖ ಅಭಿವೃದ್ಧಿಗೆ ನಾಂದಿ ಹಾಡುತ್ತದೆ ಎಂದು ನನಗೆ ಖಾತ್ರಿಯಿದೆ. ಅನುವಾದಗೊಂಡ ಈ ಪಠ್ಯಕ್ರಮದ ಉಪಯೋಗವನ್ನು ಮತ್ತಷ್ಟು ವಿದ್ಯಾರ್ಥಿಗಳು ಪಡೆದುಕೊಳ್ಳಲಿ ಎಂದು ಆಶಿಸುತ್ತೇನೆ.

(ಡಾ: ಅಶ್ವಥ್ ನಾರಾಯಣ ಸಿ.ಎನ್)

ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಕೌಶಲ್ಯ ಕರ್ನಾಟಕ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ
ಕರ್ನಾಟಕ ಸರ್ಕಾರ

## ಮುನ್ನುಡಿ

ಕರ್ನಾಟಕ ಸರ್ಕಾರದ ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು, ರಾಜ್ಯದ ಯುವಜನತೆಗೆ ಕೈಗಾರಿಕೆಗಳ ಬೇಡಿಕೆ ಆಧಾರಿತ ಕೌಶಲ್ಯ ತರಬೇತಿಗಳನ್ನು ನೀಡುತ್ತಾ ಬಂದಿದೆ. ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟಿಗೆ ಒಳಪಟ್ಟ ಎಲ್ಲಾ ಜಾಬ್ ರೋಲ್‌ಗಳ (Job Roles) ವಿಷಯಸೂಚಿ ಹಾಗೂ ಪಠ್ಯಕ್ರಮವು ಆಂಗ್ಲ ಭಾಷೆಯಲ್ಲಿ ಪ್ರಕಟಿತವಾಗಿದೆ. ಇವುಗಳ ಪೈಕಿ ಗ್ರಾಮೀಣ ಪ್ರದೇಶದ ಯುವಜನತೆಗೆ ಅತ್ಯಂತ ಪರಿಣಾಮಕಾರಿಯಾಗಿ ಕೌಶಲ್ಯ ತರಬೇತಿಯನ್ನು ನೀಡುವ ಉದ್ದೇಶದಿಂದ 70 ಜಾಬ್ ರೋಲ್‌ಗಳ ವಿಷಯಸೂಚಿ ಹಾಗೂ ಪಠ್ಯಕ್ರಮವನ್ನು ವಿಶ್ವ ಬ್ಯಾಂಕ್ ನೆರವಿನ ಜೀವನೋಪಾಯ ಉನ್ನತಿಗಾಗಿ ಕೌಶಲ್ಯ ಮತ್ತು ಜ್ಞಾನಾರ್ಜನೆ (SANKALP) ಯೋಜನೆಯಡಿ ಕನ್ನಡ ಭಾಷೆಗೆ ಅನುವಾದಿಸಲಾಗಿದೆ.

ಅನುವಾದಿತ ಈ ವಿಷಯಸೂಚಿ ಹಾಗೂ ಪಠ್ಯಕ್ರಮದಿಂದ ರಾಜ್ಯದ ಮಹತ್ವಾಕಾಂಕ್ಷಿ ಯೋಜನೆಯಾದ ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆಯಡಿ ವಿವಿಧ ವೃತ್ತಿಗಳಲ್ಲಿ ಕೌಶಲ್ಯ ತರಬೇತಿ ಪಡೆದು ಉದ್ಯೋಗ ನಿಯುಕ್ತರಾಗಿ ಉತ್ತಮ ಫಲಶೃತಿ ಪಡೆಯಬಹುದೆಂದು ವಿಶ್ವಾಸಿಸುತ್ತಾ ಎಲ್ಲಾ ಆಕಾಂಕ್ಷಿಗಳಿಗೆ ಶುಭ ಕೋರುತ್ತೇನೆ.

(ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ.)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

ಕೊಠಡಿ ಸಂಖ್ಯೆ : 347, 2ನೇ ಹಂತ, 3ನೇ ಮಹಡಿ, ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂರವಾಣಿ: ಕಛೇರಿ : 080-22253724, 22032996
ಇ-ಮೇಲ್ : acs.skill@karnataka.gov.in / Website : www.kaushalkar.com

Skill India
कौशल भारत-कुशल भारत

LSC Logistics Skill Council

# Message from Chief Executive Officer - Logistics Sector Skill Council (LSC)



## Message from CEO

The Indian logistics industry is growing, especially after facing a slowdown in the last two years. Adding to the growth are the new policies that are set to give the industry a much-needed push. Better connectivity, dedicated freight corridors, tech-driven warehousing are some key highlights as part of the 'PM Gati Shakti' plan announced during the Union Budget 2022 earlier this year.

The Indian Logistics Sector has been growing at a rapid pace and is expected to reach USD 380 Bn mark by 2025. Constant growth in online buying and thus e-commerce business, the government's focus on localised manufacturing through "Make in India" drive, and the onset of many D2C businesses – all these predicts well for the Indian Logistics Industry in 2022 and beyond.

Indian logistics sector and its growth are highly dependent on the growth of its soft infrastructure – education, training, and policy framework. India's fast paced economy, which is rapidly becoming a world leader, needs the vital support of logistics industry for its growth. Without increased capacity in logistics and the supply chain, a limit will be placed on India's economic growth.

Skills development is essential to leverage on the emerging opportunities in the logistics sector. A knowledge and service revolution in the logistics sector is bringing a greater degree of specialization in various roles and better integration of services.

This revolution is supported by a public-private partnership, and co-ordination between leading logistical companies. A training and education curriculum has been set up at the management course level to meet for pre-determined skill sets required by the industry.

Logistics services being a service-based sector can only be efficient with the efficiency of its lowest level employee. From the bottom to the top, a change in the efficiencies of personnel drives the growth of the industry, and allow Indian businesses to extent to greater heights, domestically and globally.

Skills are required for transitioning from one level to another spectrum of logistics, whilst the objective of logistics sector skill council is to generate employability, entrepreneurships and livelihood.

Sign: -

Mr. Ravikanth Yamarthy
Chief Executive Officer
Logistics Sector Skill Council

# ಮಾದರಿ ಪಠ್ಯಕ್ರಮ

## 4. ಸರಕು ಸಾಗಣೆ ಟ್ರ್ಯಾಕಿಂಗ್ ಕಾರ್ಯನಿರ್ವಾಹಕ (ಕನ್ಸೈನ್ಮೆಂಟ್ ಟ್ರ್ಯಾಕಿಂಗ್ ಎಕ್ಸಿಕ್ಯೂಟಿವ್)

ವಿಭಾಗ: **ಲಾಜಿಸ್ಟಿಕ್ಸ್**

ಉಪ ವಿಭಾಗ: **ರಸ್ತೆ ಸರಕು ಸಾಗಾಣಿಕೆ (ಲ್ಯಾಂಡ್ ಟ್ರಾನ್ಸ್ಪೋರ್ಟೇಷನ್)**

ಉದ್ಯೋಗ: **ಸರಕು ಸಾಗಣೆ ಟ್ರ್ಯಾಕಿಂಗ್ ಕಾರ್ಯನಿರ್ವಾಹಕ (ಕನ್ಸೈನ್ಮೆಂಟ್ ಟ್ರ್ಯಾಕಿಂಗ್ ಎಕ್ಸಿಕ್ಯೂಟಿವ್)**

ಉಲ್ಲೇಖ ಸಂಖ್ಯೆ: **LSC/ Q1121, ಆವೃತ್ತಿ 1.0**

NSQF ಹಂತ: **3**

# Certificate

## CURRICULUM COMPLIANCE TO qualifiCaTion paCk - naTional oCCupaTional STANDARDS

is hereby issued by the

**LOGISTIC SECTOR SKILL COUNCIL OF INDIA**

for the

## MODEL CURRICULUM

Complying to National Occupational Standards of
Job Role/ Qualification Pack: **‘Consignment Tracking Executive’** QP No. **‘ISC/ q1121 nSqf**

Date of Issuance: May 1st, 2016

Valid up to: April 30th,

*Valid up to the next review date of the Qualification Pack

Authorised Signatory
(Logistic Sector Skill Council of

# ಪರಿವಿಡಿ

1. ಪಠ್ಯಕ್ರಮ ........................................................................ 01

2. ತರಬೇತುದಾರರಿಗೆ ಇರಬೇಕಾದ ಕನಿಷ್ಟ ಅವಶ್ಯಕತೆಗಳು ..........................................06

3. ಅನುಬಂಧ: ಮೌಲ್ಯಮಾಪನದ ಮಾನದಂಡಗಳು ................................................ 07

# ಸರಕು ಸಾಗಣೆ ಟ್ರ್ಯಾಕಿಂಗ್ ಕಾರ್ಯನಿರ್ವಾಹಕ (ಕನ್ಸೈನ್ಮೆಂಟ್ ಟ್ರ್ಯಾಕಿಂಗ್ ಎಕ್ಸಿಕ್ಯೂಟಿವ್)

## ಪಠ್ಯಕ್ರಮ

ಈ ಕಾರ್ಯಕ್ರಮವು "ಲಾಜಿಸ್ಟಿಕ್ಸ್" ವಲಯದ/ಉದ್ಯಮದ (ಸೆಕ್ಟರ್/ಇಂಡಸ್ಟ್ರಿ) ಸರಕು ಸಾಗಣೆ ಟ್ರ್ಯಾಕಿಂಗ್ ಕಾರ್ಯನಿರ್ವಾಹಕ ("ಕನ್ಸೈನ್ಮೆಂಟ್ ಟ್ರ್ಯಾಕಿಂಗ್ ಎಕ್ಸಿಕ್ಯೂಟಿವ್") ಹುದ್ದೆಗೆ ಸೇರಲು ಬಯಸುವ ಅಭ್ಯರ್ಥಿಗಳಿಗೆ ತರಬೇತಿ ನೀಡುವ ಗುರಿಯನ್ನು ಹೊಂದಿದೆ ಮತ್ತು ಕಲಿಯುವವರಲ್ಲಿ ಈ ಕೆಳಗಿನ ಪ್ರಮುಖ ಸಾಮರ್ಥ್ಯಗಳನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ

<table>
<tr><th>ಕಾರ್ಯಕ್ರಮದ ಹೆಸರು</th><th colspan="3">ಸರಕು ಸಾಗಣೆ ಟ್ರ್ಯಾಕಿಂಗ್ ಕಾರ್ಯನಿರ್ವಾಹಕ (ಕನ್ಸೈನ್ಮೆಂಟ್ ಟ್ರ್ಯಾಕಿಂಗ್ ಎಕ್ಸಿಕ್ಯೂಟಿವ್)</th></tr>
<tr><td>ಅರ್ಹತಾ (ಕ್ವಾಲಿಫಿಕೇಷನ್) ಪ್ಯಾಕ್ ಹೆಸರು ಮತ್ತು ಉಲ್ಲೇಖ ಸಂಖ್ಯೆ</td><td colspan="3">LSC/ Q1121 ಆವೃತ್ತಿ 1.0</td></tr>
<tr><td>ಆವೃತ್ತಿ ಸಂಖ್ಯೆ.</td><td>1.0</td><td>ಆವೃತ್ತಿ ನವೀಕರಣ ದಿನಾಂಕ</td><td>16–04–2016</td></tr>
<tr><td>ತರಬೇತಿಗೆ ಬೇಕಾದ ಕನಿಷ್ಠ ಅವಶ್ಯಕತೆಗಳು</td><td colspan="3">8ನೇ ತರಗತಿ (ಓದಲು, ಬರೆಯಲು ಮತ್ತು ಅರ್ಥಮಾಡಿಕೊಳ್ಳಲು ಆಗುವ ಸಾಮಾನ್ಯ ಸಾಕ್ಷರತೆ) ಅಥವಾ ಯಾವುದೇ ಪದವೀಧರ, ಡಿಪ್ಲೋಮಾ ಮುಗಿಸಿದವರನ್ನು ಪರಿಗಣಿಸಬಹುದು.ಯಾವುದೇ ತರಹದ ಅನುಭವದ ಅಗತ್ಯವಿಲ್ಲ.</td></tr>
</table>

| | |
|---|---|
| **ತರಬೇತಿಯ ಫಲಿತಾಂಶಗಳು** | **ಈ ಕಾರ್ಯಕ್ರಮವನ್ನು ಪೂರ್ಣಗೊಳಿಸಿದ ನಂತರ, ಭಾಗವಹಿಸಿದವರು ಈ ಕೆಳಗಿನ ವಿಷಯಗಳಲ್ಲಿ ಸಮರ್ಥರಾಗುತ್ತಾರೆ**<br><br>**ಸರಕು ರವಾನೆಯ ಸಾಮಾನ್ಯ ಪರಿಕಲ್ಪನೆಗಳು ಮತ್ತು ಕಾರ್ಯ ವಿಧಾನಗಳು;**<br>ಸರಕು ರವಾನೆ ಟ್ರ್ಯಾಕಿಂಗ್,<br>ಟ್ರ್ಯಾಕಿಂಗ್ ಸಾಧನಗಳು ಮತ್ತು ಟ್ರಾಕಿಂಗ್ ನಲ್ಲಿ ಬಳಸುವ ತಂತ್ರಜ್ಞಾನದ ಸಾಮಾನ್ಯ ಪರಿಚಯ,<br>ಸರಕು ಸಾಗಣೆ ಟ್ರಾಕಿಂಗ್ ನಲ್ಲಿನ ಕಂಪನಿಯ ಕಾರ್ಯವಿಧಾನಗಳ ನೀತಿ ನಿಯಮಾವಳಿಗಳ ಜ್ಞಾನ ಮತ್ತು ತಿಳುವಳಿಕೆ.<br><br>**ಸರಕು ಸಾಗಣೆ ಟ್ರಾಕಿಂಗ್ ನಲ್ಲಿನ ವಿವಿಧ ಕಾರ್ಯಗಳಿಗೆ ಸಂಬಂಧಿಸಿದ ಅರಿವು ಮತ್ತು ಕೌಶಲ್ಯಗಳು:**<br>ಕಾರ್ಯಚರಣೆಯ ಮುಂಚೆ ಪರೀಕ್ಷಿಸಬೇಕಾದ ಅಂಶಗಳು (ಪ್ರಿ ಆಪರೇಷನಲ್ ಚೆಕ್ಸ್).<br>ಕಾರ್ಯಾಚರಣೆಯ ಸಂದರ್ಭದಲ್ಲಿ ಪರೀಕ್ಷಿಸಬೇಕಾದ ಅಂಶಗಳು (ಆಪರೇಷನಲ್ ಚೆಕ್ಸ್).<br>ಸಾರಿಗೆ ನಿಯಮಗಳು ಮತ್ತು ನಿಬಂಧನೆಗಳನ್ನು ಪಾಲಿಸುವುದು.<br>ತಪಾಸಣೆ (ಇನ್ಸ್ಪೆಕ್ಷನ್) ಪ್ರಕ್ರಿಯೆಗಳು, ಟ್ರಾಕಿಂಗ್ ಸಂಬಂಧಿಸಿದ ವಿವಿಧ ದಾಖಲೆಗಳು,<br>ಪ್ರಮಾಣಿತ ಕೆಲಸದ ಸೂಚನೆಗಳು, (ಸ್ಟ್ಯಾಂಡರ್ಡ್ ವರ್ಕ್ ಇನ್ಸ್ಟ್ರಕ್ಷನ್ಸ್)<br>ಸಾಗಿಸುತ್ತಿರುವ ಉತ್ಪನ್ನದ ಸ್ವರೂಪ,<br>ತುರ್ತು ಸಂದರ್ಭಗಳು ಸಂಭವಿಸದಂತೆ ಹೇಗೆ ತಡೆಯುವುದು ಮತ್ತು ಸಂಬಂಧಿಸಿದಲ್ಲಿ ಹೇಗೆ ಪ್ರತಿಕ್ರಿಸುವುದು.<br><br>**ಸರಕು ಸಾಗಣೆಯ ಸ್ಥಿತಿಗತಿಯನ್ನು ಪರಿವೀಕ್ಷಿಸುವುದರ ಪ್ರಾಮುಖ್ಯತೆ:**<br>ದಾಖಲೆಯ ವಿವರಗಳು,<br>ತೆರಳುವ ಮಾರ್ಗದ ಯೋಜನೆ,<br>ತಾಂತ್ರಿಕ ಸಮಸ್ಯೆಗಳು,<br>ವಾಹನ ಕೆಟ್ಟು ನಿಂತು ಹೋಗುವುದು ಇತ್ಯಾದಿಗಳಂತಹ ಸಾರಿಗೆ ಸವಾಲುಗಳು,<br>ಸಾರಿಗೆಗೆ ಸಂಬಂದಿಸಿದ ದಾಖಲೆ ಪತ್ರಗಳ ಸವಾಲುಗಳು,<br>ತೊಂದರೆಗಳನ್ನು ಮೇಲಧಿಕಾರಿಗಳಿಗೆ ತಿಳಿಸುವ ಪ್ರಕ್ರಿಯೆಗಳು,<br>ವರದಿ ಮಾಡುವಿಕೆ ಮತ್ತು ರೆಕಾರ್ಡಿಂಗ್ ಪ್ರಕ್ರಿಯೆಗಳು.<br><br>**ಸಹೋದ್ಯೋಗಿಗಳ ಕೆಲಸಗಳು ಮತ್ತು ಜವಾಬ್ದಾರಿಗಳನ್ನು ಅರ್ಥಮಾಡಿಕೊಳ್ಳುವುದು:** ಸುಗಮವಾಗಿ ಟ್ರ್ಯಾಕಿಂಗ್ ಮಾಡಲು ಮತ್ತು ಸುರಕ್ಷತಾ ಪ್ರಕ್ರಿಯೆಗಳನ್ನು ಪಾಲಿಸಲು ಅಂತರ್ ಇಲಾಖೆಗಳು, ಸಹ ಕೆಲಸಗಾರರು, ಮತ್ತು ಮೇಲಾಧಿಕಾರಿಗಳೊಂದಿಗೆ ಪರಿಣಾಮಕಾರಿ ಸಂವಹನವನ್ನು ನಡೆಸುವುದು.<br><br>**ಪರಿಸರ / ಔದ್ಯೋಗಿಕ ಆರೋಗ್ಯ ಮತ್ತು ಸುರಕ್ಷತೆಯ ಪರಿಚಯ:** ಸರಕು ಟ್ರ್ಯಾಕಿಂಗ್, ವೈಯಕ್ತಿಕ ಸುರಕ್ಷತೆ, ಪಿಪಿಇ ಬಳಕೆ, ಭದ್ರತಾ ಕಾರ್ಯವಿಧಾನಗಳು, ತ್ವರಿತ ತುರ್ತು ಪ್ರತಿಕ್ರಿಯೆಗಳು (ಎಮರ್ಜೆನ್ಸಿ), ಪ್ರಥಮ ಚಿಕಿತ್ಸೆ, ಅಗ್ನಿ ಸುರಕ್ಷತೆ ಮತ್ತು ಸಾಮಾನ್ಯ ನಿರ್ವಹಣೆಯಲ್ಲಿ ಅತ್ಯವಶ್ಯಕ ಬಳಕೆಯಾಗುವ ಆರೋಗ್ಯ ಮತ್ತು ಸುರಕ್ಷತಾ ಕ್ರಮಗಳ ಬಗ್ಗೆ ಚೆನ್ನಾಗಿ ತಿಳುವಳಿಕೆ. |

ಈ ಕೋರ್ಸ್ "SSC: ಲಾಜಿಸ್ಟಿಕ್ಸ್ ಸೆಕ್ಟರ್ ಸ್ಕಿಲ್ ಕೌನ್ಸಿಲ್" ನಿಂದ ನೀಡಲಾದ " ಸರಕು ಸಾಗಣೆ ಟ್ರ್ಯಾಕಿಂಗ್ ಕಾರ್ಯನಿರ್ವಾಹಕ (ಕನ್ಸೈನ್‌ಮೆಂಟ್ ಟ್ರ್ಯಾಕಿಂಗ್ ಎಕ್ಸಿಕ್ಯೂಟಿವ್)" ಅರ್ಹತಾ (ಕ್ವಾಲಿಫಿಕೇಶನ್) ಪ್ಯಾಕ್‌ನ 4 ರಲ್ಲಿ 4 ರಾಷ್ಟ್ರೀಯ ಔದ್ಯೋಗಿಕ ಮಾನದಂಡಗಳನ್ನು ಒಳಗೊಂಡಿದೆ.

| ಕ್ರಮ ಸಂಖ್ಯೆ | ಘಟಕ (ಮಾಡ್ಯೂಲ್) | ಪ್ರಮುಖ ಕಲಿಕಾ ಫಲಿತಾಂಶಗಳು | ಅಗತ್ಯವಿರುವ ಸಲಕರಣೆಗಳು |
|---|---|---|---|
| 1 | ಪರಿಚಯ<br><br>ಸಿದ್ಧಾಂತ (ಥಿಯರಿ) ತರಗತಿಯ ಅವಧಿ (hh:mm)<br>20:00<br><br>ಪ್ರಾಯೋಗಿಕ (ಪ್ರಾಕ್ಟಿಕಲ್) ತರಗತಿಯ ಅವಧಿ (hh:mm)<br>10:00<br><br>ಸಂಬಂಧಿತ NOS ಸಂಕೇತ (ಕೋಡ್)<br>ಸಂಪರ್ಕ ಸೇತು ಘಟಕ (ಬ್ರಿಡ್ಜ್ ಮಾಡ್ಯೂಲ್) | ಈ ಘಟಕವನ್ನು (ಮಾಡ್ಯೂಲ್) ಪೂರ್ಣಗೊಳಿಸಿದ ನಂತರ, ಭಾಗವಹಿಸಿದವರು ಈ ಕೆಳಗಿನ ವಿಷಯಗಳಲ್ಲಿ ಸಮರ್ಥರಾಗುತ್ತಾರೆ.<br><br>• ಪೂರೈಕೆ ಸರಪಳಿ (ಸಪ್ಲೈ ಚೈನ್) ಮತ್ತು ಲಾಜಿಸ್ಟಿಕ್ ನಿರ್ವಹಣೆಯ ಕುರಿತು ತಿಳಿಯಲು ಸಾಧ್ಯವಾಗುತ್ತದೆ.<br>• ವಿವಿಧ ರೀತಿಯ ದಾಸ್ತಾನು (ಇನ್ವೆಂಟರಿ) ಮತ್ತು ಅದರ ಪ್ರಾಮುಖ್ಯತೆಯನ್ನು ವಿವರಿಸಲು ಸಾಧ್ಯವಾಗುತ್ತದೆ<br>• ಗೋದಾಮು (ವೇರ್ ಹೌಸಿಂಗ್) ಉದ್ಯಮ ಮತ್ತು ಅದರಲ್ಲಿನ ಉದ್ಯೋಗಾವಕಾಶಗಳ ತಿಳುವಳಿಕೆ<br>• ಸರಕು ಸಾಗಣೆ ಟ್ರ್ಯಾಕಿಂಗ್ ಕಾರ್ಯನಿರ್ವಾಹಕನಾಗಿ ನಿಮ್ಮ ಕೆಲಸದ ಪಾತ್ರಗಳನ್ನು ಮತ್ತು ಜವಾಬ್ದಾರಿಗಳನ್ನುವಿವರಿಸಲು.<br>• ಗೋದಾಮಿನ (ವೇರ್ ಹೌಸಿಂಗ್) ವಿವಿಧ ಕಾರ್ಯಾಚರಣೆಗಳು ಮತ್ತು ಪರಿಣಾಮಕಾರಿ ಲಾಜಿಸ್ಟಿಕ್ಸ್ ವ್ಯವಸ್ಥೆಗಳಲ್ಲಿ ಅವುಗಳ ಮಹತ್ವವನ್ನು ಅರ್ಥಮಾಡಿಕೊಳ್ಳಲು.<br>• ಸರಕು ಸಾಗಣೆ ಟ್ರ್ಯಾಕಿಂಗ್ ಕಾರ್ಯನಿರ್ವಾಹಕ ಎಂಬ ಕೆಲಸದಲ್ಲಿ ಅವನ/ಅವಳ ಮೇಲೆ ಇರುವ ನಿರೀಕ್ಷೆಗಳನ್ನು ಅರ್ಥಮಾಡಿಕೊಳ್ಳಲು.<br>• ಗೋದಾಮಿನ (ವೇರ್ ಹೌಸಿಂಗ್) ವಿವಿಧ ಕಾರ್ಯಗಳು / ಕಾರ್ಯಾಚರಣೆಗಳನ್ನು ಗ್ರಹಿಸಲು<br>• ಒಳಬರುವ (ಇನ್ ಬೌಂಡ್) ಮತ್ತು ಹೊರಹೋಗುವ (ಔಟ್ ಬೌಂಡ್) ಚಟುವಟಿಕೆಗಳನ್ನು ವಿವರಿಸಲು<br>• ಗೋದಾಮಿನೊಳಗೆ (ವೇರ್ ಹೌಸಿಂಗ್) ನಡೆಸುವ ಪ್ರಮುಖ ಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳಲು<br>• ಸರಕು ಸಾಗಣೆ ಟ್ರ್ಯಾಕಿಂಗ್ ಕಾರ್ಯನಿರ್ವಾಹಕ ಮುಖ್ಯ ಪಾತ್ರಗಳ ಬಗ್ಗೆ ಸ್ಪಷ್ಟತೆ ಪಡೆಯಲು ಸಾಧ್ಯವಾಗಲು | ಬೋಧನಾ ಫಲಕ, ಕಂಪ್ಯೂಟರ್, ಪ್ರೊಜೆಕ್ಟರ್, ವಿಡಿಯೋ ಪ್ಲೇಯರ್, ಅಥವಾ ಟಿವಿ, ಪಟ್ಟಿಕೆ ಸಂಕೇತ (ಬಾರ್‌ಕೋಡ್), ಮತ್ತು ಚಿತ್ರಶೋಧಕ (ಸ್ಕ್ಯಾನರ್) – ಡೆಮೋಗಾಗಿ |
| 2 | ಟ್ರ್ಯಾಕಿಂಗ್ ಮಾಡಲು ಸಜ್ಜಾಗುವುದು<br><br>ಸಿದ್ಧಾಂತ (ಥಿಯರಿ) ತರಗತಿಯ ಅವಧಿ (hh:mm)<br>20:00<br><br>ಪ್ರಾಯೋಗಿಕ (ಪ್ರಾಕ್ಟಿಕಲ್) ತರಗತಿಯ ಅವಧಿ (hh:mm)<br>50:00<br>ಸಂಬಂಧಿತ NOS ಸಂಕೇತ(ಕೋಡ್)<br>LSC/N 1123 | ಈ ಘಟಕವನ್ನು (ಮಾಡ್ಯೂಲ್) ಪೂರ್ಣಗೊಳಿಸಿದ ನಂತರ, ಭಾಗವಹಿಸಿದವರು ಈ ಕೆಳಗಿನ ವಿಷಯಗಳಲ್ಲಿ ಸಮರ್ಥರಾಗುತ್ತಾರೆ<br><br>• ಸರಕು ಸಾಗಣೆ ಟ್ರ್ಯಾಕಿಂಗ್ ಮಾಡುವುದರ ಮಹತ್ವ.<br>• ವಿವಿಧ ರೀತಿಯ ಸರಕುಗಳು ಮತ್ತು ಅವುಗಳ ವರ್ಗೀಕರಣದ ಬಗ್ಗೆ ಸ್ಪಷ್ಟ ಜ್ಞಾನ.<br>• ಸರಕು ಸಾಗಣೆ ಟ್ರ್ಯಾಕಿಂಗ್‌ನಲ್ಲಿ (ಕನ್ಸೈನ್ಮೆಂಟ್ ಟ್ರ್ಯಾಕಿಂಗ್) ದಾಖಲೆ ಪತ್ರಗಳ ಮಹತ್ವ<br>• ಸಾರಿಗೆಗೆ ಸಂಬಂಧಿಸಿದ ವಿವಿಧ ಸವಾಲುಗಳನ್ನು ತಿಳಿದುಕೊಳ್ಳಲು<br>• ಸರಕುಗಳನ್ನು ಪತ್ತೆಹಚ್ಚುವಲ್ಲಿ ಸ್ಥಿತಿ ಪರಿಶೀಲನೆಯ ಪ್ರಾಮುಖ್ಯತೆಯನ್ನು ವರ್ಗೀಕರಿಸಲು<br>• ಲಭ್ಯವಿರುವ ವಿವಿಧ ಟ್ರ್ಯಾಕಿಂಗ್ ವ್ಯವಸ್ಥೆಗಳ ಬಗ್ಗೆ ತಿಳಿದುಕೊಳ್ಳಲು ಸರಕು ಸಾಗಣೆ ಟ್ರ್ಯಾಕಿಂಗ್‌ನಲ್ಲಿ ಬಳಸುವ ವಿವಿಧ ರೀತಿಯ ದಾಖಲೆಗಳನ್ನು ಗುರುತಿಸಲು<br>• ವರದಿ ಮಾಡುವ ರೀತಿ ಮತ್ತು ಸಂವಹನದ ವಿವಿಧ ಮಾರ್ಗಗಳ ವಿವರಗಳು.<br>• ರಸ್ತೆ ಮೂಲಕ ಸರಕು ಸಾಗಣೆಗೆ ಸಂಬಂಧಿಸಿದ ಮೂಲಸೌಕರ್ಯದ ಸವಾಲುಗಳ ಬಗ್ಗೆ ಅನ್ವೇಷಣೆ.<br>• ಅಪಾಯಕಾರಿ ವಸ್ತುಗಳ (ಹಜಾರ್ಡ್ ಮೆಟೀರಿಯಲ್) ಸಾಗಾಣಿಕೆಯ ನಿಯಮಗಳನ್ನು ಅರ್ಥಮಾಡಿಕೊಳ್ಳುವುದು | ಬೋಧನಾ ಫಲಕ, ಕಂಪ್ಯೂಟರ್, ಪ್ರೊಜೆಕ್ಟರ್, ಸರಕು ಸಾಗಣೆಗೆ ಸಂಬಂಧಿಸಿದ ಮಾದರಿ ದಾಖಲೆಗಳು |

| ಕ್ರಮ ಸಂಖ್ಯೆ | ಘಟಕ (ಮಾಡ್ಯೂಲ್) | ಪ್ರಮುಖ ಕಲಿಕಾ ಫಲಿತಾಂಶಗಳು | ಅಗತ್ಯವಿರುವ ಸಲಕರಣೆಗಳು |
|---|---|---|---|
| 3 | ಸರಕು ಸಾಗಣೆಗಳನ್ನು ಟ್ರ್ಯಾಕ್ ಮಾಡುವುದು<br><br>ಸಿದ್ಧಾಂತ (ಥಿಯರಿ) ತರಗತಿಯ ಅವಧಿ (hh:mm) 15:00<br><br>ಪ್ರಾಯೋಗಿಕ (ಪ್ರಾಕ್ಟಿಕಲ್) ತರಗತಿಯ ಅವಧಿ (hh:mm) 50:00<br><br>ಸಂಬಂಧಿತ NOS ಸಂಕೇತ (ಕೋಡ್) LSC/N 1124 | **ಈ ಘಟಕವನ್ನು (ಮಾಡ್ಯೂಲ್) ಪೂರ್ಣಗೊಳಿಸಿದ ನಂತರ, ಭಾಗವಹಿಸಿದವರು ಈ ಕೆಳಗಿನ ವಿಷಯಗಳಲ್ಲಿ ಸಮರ್ಥರಾಗುತ್ತಾರೆ**<br><br>• ಲಾರಿ ಸಾಗಬೇಕಾದ ಮಾರ್ಗ ಯೋಜನೆಯನ್ನು ಪರಿಶೀಲಿಸುವಲ್ಲಿ ಸರಕು ಸಾಗಣೆ ಟ್ರ್ಯಾಕಿಂಗ್ ಕಾರ್ಯನಿರ್ವಾಹಕರ (ಕನ್ಸೈನ್ಮೆಂಟ್ ಟ್ರ್ಯಾಕಿಂಗ್ ಎಕ್ಸಿಕ್ಯೂಟಿವ್) ಪಾತ್ರ.<br>• ಲಾರಿ ಸಾಗಬೇಕಾದ ಮಾರ್ಗ ಮತ್ತು ವರದಿ ಮಾಡುವಿಕೆಯ ಮಹತ್ವವನ್ನು ಅರ್ಥಮಾಡಿಕೊಳ್ಳುವುದು.<br>• ಹೋಗಿ ಸೇರಬೇಕಾದ ಸ್ಥಳವನ್ನು (ಡೆಸ್ಟಿನೇಷನ್) ತಲುಪಲು ವಿಳಂಬ ಉಂಟುಮಾಡುವ ವಿವಿಧ ಅನಿಯಂತ್ರಿತ ಕಾರಣಗಳನ್ನು ಗುರುತಿಸುವುದು.<br>• ಗಂಭೀರ ಹಾನಿಯನ್ನು ಉಂಟುಮಾಡುವ ಅಪಘಾತಗಳಂತಹ ವಿವಿಧ ಅಪಾಯಗಳ ಬಗ್ಗೆ ತಿಳಿದುಕೊಳ್ಳುವುದು.<br>• ಯಾವುದೇ ಮಾಹಿತಿಯನ್ನು ಉನ್ನತ ಆಡಳಿತ ವರ್ಗ ಅಧಿಕಾರಿಗಳಿಗೆ ತಿಳಿಸುವ ಮಹತ್ವವನ್ನು ವಿವರಿಸಲು.<br>• ಕಾರ್ಯಕ್ಷಮತೆಯನ್ನು ಹೆಚ್ಚಿಸುವಲ್ಲಿ ಪರಸ್ಪರ ಕೌಶಲ್ಯಗಳ ಮಹತ್ವದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲು. | ಬೋಧನಾ ಫಲಕ,<br>ಕಂಪ್ಯೂಟರ್,<br>ಪ್ರೊಜೆಕ್ಟರ್,<br>ಎಚ್ಚರಿಕೆ ಫಲಕಗಳು,<br>ಮಾಡಬೇಕಾದ ಮತ್ತು ಮಾಡಬಾರದ ಕೆಲಸದ ಪಟ್ಟಿಗಳು,<br>ಫೋರ್ಕ್ಲಿಫ್ಟ್‌ಗಳು,<br>ಡಮ್ಮಿ ಲೋಡ್ ಟೆಸ್ಟ್ ಡ್ರೈವ್ ಟ್ರ್ಯಾಕ್ ಜೊತೆಗೆ ವಿವಿಧ ಸಿಮ್ಯುಲೇಶನ್ ಗಳು,<br>ಡಮ್ಮಿ ಪ್ಯಾಲೆಟ್ ಮತ್ತು ಶೆಲ್ಫ್,<br>ಶಾಪ್ ಫ್ಲೋರ್ ತರಬೇತಿ ಸೌಲಭ್ಯ,<br>ಗೋದಾಮಿನ (ವೇರ್ ಹೌಸಿಂಗ್) ತರಬೇತಿ ಸೌಲಭ್ಯ. |
| 4 | ಟ್ರ್ಯಾಕಿಂಗ್ ನಂತರದ ಚಟುವಟಿಕೆಗಳನ್ನು ನಿರ್ವಹಿಸುವುದು<br><br>ಸಿದ್ಧಾಂತ (ಥಿಯರಿ) ತರಗತಿಯ ಅವಧಿ (hh:mm) 15:00<br><br>ಪ್ರಾಯೋಗಿಕ (ಪ್ರಾಕ್ಟಿಕಲ್) ತರಗತಿಯ ಅವಧಿ (hh:mm) 40:00<br><br>ಸಂಬಂಧಿತ NOS ಸಂಕೇತ(ಕೋಡ್) LSC/N 1125 | **ಈ ಘಟಕವನ್ನು (ಮಾಡ್ಯೂಲ್) ಪೂರ್ಣಗೊಳಿಸಿದ ನಂತರ, ಭಾಗವಹಿಸಿದವರು ಈ ಕೆಳಗಿನ ವಿಷಯಗಳಲ್ಲಿ ಸಮರ್ಥರಾಗುತ್ತಾರೆ**<br><br>• ಸಿಸ್ಟಂನಲ್ಲಿ ಮಾಹಿತಿಯ ನವೀಕರಣವನ್ನು ನಿರ್ವಹಿಸಲು.<br>• ಲಾರಿಯಿಂದ ಸ್ಥಿತಿ ಗತಿಯ ಪ್ರತಿಕ್ರಿಯೆ ಸಿಗದಿದ್ದಲ್ಲಿ ಮೇಲಾಧಿಕಾರಿಗಳಿಗೆ ತಿಳಿಸುವ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವುದು.<br>• ಟ್ರ್ಯಾಕಿಂಗ್‌ನಲ್ಲಿ ಅನುಸರಿಸಬೇಕಾದ ಮುಚ್ಚುವ ಪ್ರಕ್ರಿಯೆಗಳನ್ನು ವಿವರಿಸಲು ಸಮರ್ಥರಾಗಿರುತ್ತಾರೆ.<br>• ಸಾರಿಗೆ ನಿರ್ವಹಣಾ ವ್ಯವಸ್ಥೆಯನ್ನು ಬಳಸುವ ಮಹತ್ವವನ್ನು ತಿಳಿಯುವುದು<br>• ಗ್ರಾಹಕರಿಗೆ ವಿಳಂಬವಾಗಿ ವಿತರಣೆ ಆದ ಸಂಧರ್ಭಗಳಲ್ಲಿ ಮೇಲಾಧಿಕಾರಿಗಳಿಗೆ ತಿಳಿಸುವ ಪ್ರಕ್ರಿಯೆ ಮತ್ತು ಕಾರ್ಯವಿಧಾನಗಳನ್ನು ಗುರುತಿಸುವುದು.<br>• ವಿತರಣಾ ನಂತರದ ವರದಿಯನ್ನು ರಚಿಸುವ ಬಗ್ಗೆ ಜ್ಞಾನವನ್ನು ಪಡೆಯುವುದು.<br>• ದಿನದ ಕೊನೆಯಲ್ಲಿ ನಿರ್ವಹಿಸಬೇಕಾದ ವಿವಿಧ ಕರ್ತವ್ಯಗಳನ್ನು ವಿವರಿಸುವುದು.<br>• ವರದಿಗಳನ್ನು ಹಸ್ತಾಂತರಿಸುವಲ್ಲಿ ಅನುವರ್ತನೆಯ ಸಂದರ್ಭದಲ್ಲಿ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವುದು. | ಬೋಧನಾ ಫಲಕ,<br>ಕಂಪ್ಯೂಟರ್,<br>ಪ್ರೊಜೆಕ್ಟರ್,<br>ಸರಕು ಸಾಗಣೆಗೆ ಸಂಬಂಧಿಸಿದ ಮಾದರಿ ದಾಖಲೆಗಳು |

| ಕ್ರಮ ಸಂಖ್ಯೆ | ಘಟಕ (ಮಾಡ್ಯೂಲ್) | ಪ್ರಮುಖ ಕಲಿಕಾ ಫಲಿತಾಂಶಗಳು | ಅಗತ್ಯವಿರುವ ಸಲಕರಣೆಗಳು |
|---|---|---|---|
| 5 | ಸರಕು ಸಾಗಣೆಗಳನ್ನು ಟ್ರ್ಯಾಕ್ ಮಾಡುವಾಗ ಆರೋಗ್ಯ,ಸುರಕ್ಷತೆ ಮತ್ತು ಭದ್ರತಾ ಕ್ರಮಗಳನ್ನು ಪಾಲಿಸುವುದು<br><br>ಸಿದ್ಧಾಂತ (ಥಿಯರಿ) ತರಗತಿಯ ಅವಧಿ (hh:mm)<br>10:00<br><br>ಪ್ರಾಯೋಗಿಕ ತರಗತಿಯ (ಪ್ರಾಕ್ಟಿಕಲ್) ಅವಧಿ (hh:mm)<br>40:00<br><br>ಸಂಬಂಧಿತ NOS ಸಂಕೇತ(ಕೋಡ್) LSC/N 1130 | **ಈ ಘಟಕವನ್ನು (ಮಾಡ್ಯೂಲ್) ಪೂರ್ಣಗೊಳಿಸಿದ ನಂತರ, ಭಾಗವಹಿಸಿದವರು ಈ ಕೆಳಗಿನ ವಿಷಯಗಳಲ್ಲಿ ಸಮರ್ಥರಾಗುತ್ತಾರೆ**<br><br>• ಮಾಹಿತಿ ಭದ್ರತೆಯ ಮಹತ್ವವನ್ನು ಅರ್ಥಮಾಡಿಕೊಳ್ಳುವುದು.<br>• ಮಾಹಿತಿ ಭದ್ರತೆಗಾಗಿ ಅನುಸರಿಸಬೇಕಾದ ವಿವಿಧ ವಿಧಾನಗಳು.<br>• ತನ್ನ ವೈಯಕ್ತಿಕ ಮಾಹಿತಿ ಭದ್ರತೆಯ ಅಗತ್ಯತೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲು.<br>• ವಿವಿಧ ರೀತಿಯ ವೈಯಕ್ತಿಕ ಮಾಹಿತಿಯನ್ನು ಗ್ರಹಿಸುವುದು.<br>• ಭದ್ರತಾ ಕೊರತೆಯಿಂದ ಮಾಹಿತಿಗಳು ಅಸುರಕ್ಷಿತವಾದರೆ ಅಂತಹ ಪರಿಸ್ಥಿತಿಗಳಿಂದ ಉಂಟಾಗಬಹುದಾದ ಪರಿಣಾಮಗಳನ್ನು ಗುರುತಿಸುವುದು.<br>• ನಿಯಮಾವಳಿ ಶಿಷ್ಟಾಚಾರಗಳ (ಪ್ರೋಟೋಕಾಲ್) ಉಲ್ಲಂಘನೆ ಆಗಿದ್ದಲ್ಲಿ ಆ ಬಗ್ಗೆ ಮೇಲಾಧಿಕಾರಿಗಳಿಗೆ ವರದಿ ಮಾಡುವ ಬಗ್ಗೆ ಅರ್ಥಮಾಡಿಕೊಳ್ಳುವುದು.<br>• ದತ್ತಾಂಶ (ಡೇಟಾ) ಉಲ್ಲಂಘನೆ ಬಗ್ಗೆ ತಿಳುವಳಿಕೆ ಮತ್ತು ಅದನ್ನು ನಿವಾರಿಸುವ ಮಾರ್ಗಗಳನ್ನು ಅರಿಯುವುದು.<br>• ದತ್ತಾಂಶ (ಡೇಟಾ) ಉಲ್ಲಂಘನೆಯನ್ನು ನಿಗ್ರಹಿಸಲು ಅನುಸರಿಸಬೇಕಾದ ಭದ್ರತಾ ಕ್ರಮಗಳನ್ನು ವಿವರಿಸುವುದು. | ಬೋಧನಾ ಫಲಕ, ಕಂಪ್ಯೂಟರ್, ಪ್ರೊಜೆಕ್ಟರ್,<br><br>**ಕಾರ್ಯಾಗಾರದ ಸುರಕ್ಷತೆಗಾಗಿ ಬೇಕಾದ ಸಲಕರಣೆಗಳು (ವರ್ಕ್ ಶಾಪ್ ಸೇಫ್ಟಿ):**<br>ಅಗ್ನಿಶಾಮಕ ಯಂತ್ರಗಳು (ಫೈರ್ ಎಕ್ಸ್ಟಿಂಗ್ವಿಷರ್), ಪ್ರಥಮ ಚಿಕಿತ್ಸಾ ಕಿಟ್‌ಗಳು, ಸುರಕ್ಷತಾ ಚಿಹ್ನೆಗಳು, ಸುರಕ್ಷತಾ ನಿಯಮಗಳು ಮತ್ತು ಡ್ರಿಲ್‌ಗಳ ಕುರಿತು SOP ಪಟ್ಟಿಗಳು. ಕೆಲಸದ ಪ್ರದೇಶದಲ್ಲಿ ಮಾಡಬೇಕಾದ ಮತ್ತು ಮಾಡಬಾರದಿರುವ ಸಂಗತಿಗಳ ಪಟ್ಟಿಗಳು |
| | ಒಟ್ಟು ಅವಧಿ<br><br>ಸಿದ್ಧಾಂತ (ಥಿಯರಿ) ತರಗತಿಯ ಅವಧಿ<br>**80:00**<br><br>ಪ್ರಾಯೋಗಿಕ (ಪ್ರಾಕ್ಟಿಕಲ್) ತರಗತಿಯ ಅವಧಿ:<br>**190:00** | **ಬೇಕಾಗುವ ಅನನ್ಯ ಸಲಕರಣೆಗಳು :**<br>• ಮಾದರಿ ಟ್ರ್ಯಾಕಿಂಗ್ ದಾಖಲೆಗಳಾದ LR (ಲಾರಿ ರೆಸಿಪ್ಟ್), ಡೆಲಿವರಿ ಚಲನ್, ಚೆಕ್ ಪೋಸ್ಟ್ ವಿವರಗಳು<br>• ಟ್ರ್ಯಾಕಿಂಗ್ ಸಾಧನ ಮಾದರಿ – GPS ವ್ಯವಸ್ಥೆ •<br>• ಕಾರ್ಯಾಗಾರದ ಸುರಕ್ಷತೆಗೆ ಬೇಕಾದ ಸಲಕರಣೆಗಳು : ಅಗ್ನಿಶಾಮಕಗಳು , ಪ್ರಥಮ ಚಿಕಿತ್ಸಾ ಕಿಟ್‌ಗಳು , ಸುರಕ್ಷತಾ ಚಿಹ್ನೆಗಳು | |

**ಸಂಪೂರ್ಣ ಪಠ್ಯ ಕ್ರಮದ ಅವಧಿ 270: 00 ಗಂಟೆಗಳು**

**(ಈ ಪಠ್ಯಕ್ರಮವನ್ನು ಎಸ್‌ಎಸ್‌ಸಿ ಅನುಮೋದಿಸಿದೆ: ಲಾಜಿಸ್ಟಿಕ್ಸ್ ಸ್ಕಿಲ್ ಕೌನ್ಸಿಲ್)**

"ಸರಕು ಸಾಗಣೆ ಟ್ರ್ಯಾಕಿಂಗ್ ಕಾರ್ಯನಿರ್ವಾಹಕ (ಕನ್ಸೈನ್‌ಮೆಂಟ್ ಟ್ರ್ಯಾಕಿಂಗ್ ಎಕ್ಸಿಕ್ಯುಟಿವ್)" ಈ ಉದ್ಯೋಗ ಪಾತ್ರಕ್ಕಾಗಿ ತರಬೇತುದಾರರಿಗೆ ಇರಬೇಕಾದ ಕನಿಷ್ಠ ಅವಶ್ಯಕತೆಗಳು ಅನ್ನು ಅರ್ಹತಾ ಪ್ಯಾಕ್‌ಗೆ ಮ್ಯಾಪ್ ಮಾಡಲಾಗಿದೆ: "LSC/Q1121"

| ಕ್ರಮ ಸಂಖ್ಯೆ | ಪ್ರದೇಶ | ವಿವರಗಳು |
|---|---|---|
| 1 | ವಿವರಣೆ | ಅರ್ಹತಾ (ಕ್ವಾಲಿಫಿಕೇಷನ್) ಪ್ಯಾಕ್ "LSC/Q 1121" ಗೆ ಅನುಗುಣವಾಗಿ, ಮೇಲೆ ವಿವರಿಸಿದ ಪಠ್ಯಕ್ರಮಕ್ಕೆ ಮಾನ್ಯತೆ ಪಡೆದ ತರಬೇತಿ ಸೇವೆಯನ್ನು ನೀಡುವುದು |
| 2 | ವೈಯಕ್ತಿಕ ಗುಣಲಕ್ಷಣಗಳು | ತರಬೇತಿಯನ್ನು ನಡೆಸುವ ಸಾಮರ್ಥ್ಯ ಮತ್ತು ತರಬೇತಿಯ ಕೊನೆಯಲ್ಲಿ ಯೋಗ್ಯ , ಉದ್ಯೋಗಕ್ಕೆ ಅರ್ಹ ಅಭ್ಯರ್ಥಿಗಳನ್ನು ಖಚಿತಪಡಿಸಿಕೊಳ್ಳಲು ತರಬೇತಿಯ ಪೂರ್ವ / ನಂತರ ಸತತ ಶ್ರಮ ಮಾಡುವುದು. ಉತ್ತಮ ಸಂವಹನ ಕೌಶಲ್ಯ ಸೇರಿದಂತೆ ಪರಸ್ಪರ ಬಾಂಧವ್ಯ ಕೌಶಲ್ಯಗಳು, ತಂಡದ ಭಾಗವಾಗಿ ಕೆಲಸ ಮಾಡುವ ಸಾಮರ್ಥ್ಯ; ಗುಣಮಟ್ಟ ಮತ್ತು ಇತರರ ಅಭಿವೃದ್ಧಿಗಾಗಿ ಉತ್ಸಾಹ ಹೊಂದಿರುವುದು, ಉತ್ತಮವಾಗಿ ಸಂಘಟಿತ ಮತ್ತು ಕೇಂದ್ರೀಕೃತವಾಗಿರುವುದು, ವೇರ್‌ಹೌಸಿಂಗ್ ವಲಯದಲ್ಲಿ ಇತ್ತೀಚಿನ ಹೊಸ ಜ್ಞಾನ ಕಲಿಯಲು ಮತ್ತು ತಮ್ಮನ್ನು ತಾವು ನವೀಕರಿಸಲು ಉತ್ಸುಕರಾಗಿರುವಂತವರು. |
| 3 | ಕನಿಷ್ಠ ಶೈಕ್ಷಣಿಕ ಅರ್ಹತೆಗಳು | 8 ನೇ ತರಗತಿಗೆ ಸಮಾನವಾದ ಅಥವಾ ಡಿಪ್ಲೊಮಾ / ಪದವಿ (ಯಾವುದೇ, ಎಂಜಿನಿಯರಿಂಗ್, ಕಲೆ, ವಾಣಿಜ್ಯ) ಮುಗಿಸಿದವರನ್ನು ಪರಿಗಣಿಸಬಹುದು. |
| 4a | ಕಾರ್ಯಕ್ಷೇತ್ರ (ಡೊಮೇನ್ ಸರ್ಟಿಫಿಕೇಶನ್) ಪ್ರಮಾಣೀಕರಣ | ಈ ಕೆಲಸಕ್ಕಾಗಿ ಪ್ರಮಾಣೀಕರಿಸಲಾಗುತ್ತದೆ: "ಸರಕು ಸಾಗಣೆ ಟ್ರ್ಯಾಕಿಂಗ್ ಕಾರ್ಯನಿರ್ವಾಹಕ (ಕನ್ಸೈನ್ಮೆಂಟ್ ಟ್ರ್ಯಾಕಿಂಗ್ ಎಕ್ಸಿಕ್ಯೂಟಿವ್)" "LSC/Q 1121" QP ಗೆ ಮ್ಯಾಪ್ ಮಾಡಲಾಗಿದೆ:. ಕನಿಷ್ಠ ಗಳಿಸ ಬೇಕಾದ ಅಂಕ ಶೇಕಡ 70%. |
| 4b | ವೇದಿಕೆ ಪ್ರಮಾಣೀಕರಣ (ಪ್ಲಾಟ್ ಫಾಮ್ ಸರ್ಟಿಫಿಕೇಶನ್) | ಈ ಕೆಲಸಕ್ಕಾಗಿ ತರಬೇತುದಾರನನ್ನು ಪ್ರಮಾಣೀಕರಿಸಲು ಶಿಫಾರಸು ಮಾಡಲಾಗುತ್ತದೆ: "ತರಬೇತುದಾರ", "SSC/ Q 1402" ಅರ್ಹತಾ (ಕ್ವಾಲಿಫಿಕೇಷನ್) ಪ್ಯಾಕ್‌ಗೆ ಮ್ಯಾಪ್ ಮಾಡಲಾಗಿದೆ. ಕನಿಷ್ಠ ಗಳಿಸ ಬೇಕಾದ ಅಂಕ ಶೇಕಡ 85% |
| 5 | ಅನುಭವ | ಸರಕು ಸಾಗಣೆ ಟ್ರ್ಯಾಕಿಂಗ್ ಕಾರ್ಯನಿರ್ವಾಹಕ (ಕನ್ಸೈನ್ಮೆಂಟ್ ಟ್ರ್ಯಾಕಿಂಗ್ ಎಕ್ಸಿಕ್ಯುಟಿವ್) ಪ್ರಮಾಣೀಕರಣದೊಂದಿಗೆ ಕನಿಷ್ಠ 1 ವರ್ಷಗಳ ಅನುಭವ ಇರಬೇಕು |

# ಅನುಬಂಧ: ಮೌಲ್ಯಮಾಪನದ ಮಾನದಂಡಗಳು

| | |
|---|---|
| ಕೊರಿಯರ್ ಡೆಲಿವರಿ ಕಾರ್ಯನಿರ್ವಾಹಕರಿಗೆ ಅನ್ವಯವಾಗುವ ಮೌಲ್ಯಮಾಪನದ ಮಾನದಂಡಗಳು | |
| ಉದ್ಯೋಗದ ಪಾತ್ರ | ಸರಕು ಸಾಗಣೆ ಟ್ರ್ಯಾಕಿಂಗ್ ಕಾರ್ಯನಿರ್ವಾಹಕ (ಕನ್ಸೈನ್ಮೆಂಟ್ ಟ್ರ್ಯಾಕಿಂಗ್ ಎಕ್ಸಿಕ್ಯುಟಿವ್) |
| ಅರ್ಹತಾ (ಕ್ವಾಲಿಫಿಕೇಷನ್) ಪ್ಯಾಕ್ | LSC/Q1121 |
| ವಲಯದ ಕೌಶಲ್ಯ ಮಂಡಳಿ | ಭಾರತದ ಲಾಜಿಸ್ಟಿಕ್ ವಲಯ ಕೌಶಲ್ಯ ಮಂಡಳಿ (ಲಾಜಿಸ್ಟಿಕ್ ಸೆಕ್ಟರ್ ಸ್ಕಿಲ್ ಕೌನ್ಸಿಲ್ ಆಫ್ ಇಂಡಿಯಾ) |

| ಕ್ರಮ ಸಂಖ್ಯೆ | ಮೌಲ್ಯಮಾಪನಕ್ಕೆ ಮಾರ್ಗಸೂಚಿಗಳು |
|---|---|
| 1 | ವಲಯ ಕೌಶಲ್ಯ ಮಂಡಳಿಯು (ಸೆಕ್ಟರ್ ಸ್ಕಿಲ್ ಕೌನ್ಸಿಲ್) ಪ್ರತಿ ಅರ್ಹತಾ (ಕ್ವಾಲಿಫಿಕೇಷನ್) ಪ್ಯಾಕ್ ಮೌಲ್ಯಮಾಪನಕ್ಕೆ ಮಾನದಂಡಗಳನ್ನು ರಚಿಸುತ್ತದೆ.<br>ಪ್ರತಿ ಕಾರ್ಯಕ್ಷಮತೆಯ ಮಾನದಂಡಕ್ಕೆ (PC) NOS ನಲ್ಲಿ ಅದರ ಪ್ರಾಮುಖ್ಯತೆಗೆ ಅನುಗುಣವಾಗಿ ಅಂಕಗಳನ್ನು ನೀಡಲಾಗುತ್ತದೆ. ಎಸ್ಎಸ್ಸಿ ಪ್ರತಿ PCಗೆ ಸಿದ್ಧಾಂತ ಮತ್ತು ಕೌಶಲ್ಯಗಳ ಪ್ರಾಯೋಗಿಕ ಅಂಕಗಳ ಅನುಪಾತವನ್ನು ನೀಡುತ್ತದೆ. |
| 2 | ಸಿದ್ಧಾಂತ (ಥಿಯರಿ) ಭಾಗದ ಮೌಲ್ಯಮಾಪನವು SSC ರಚಿಸಿದ ಪ್ರಶ್ನೆಗಳ ಜ್ಞಾನ ಬ್ಯಾಂಕ್ ಅನ್ನು ಆಧರಿಸಿದೆ. |
| 3 | ವೈಯಕ್ತಿಕ ಮೌಲ್ಯಮಾಪನ ಏಜೆನ್ಸಿಗಳು ಪ್ರತಿ ಅಭ್ಯರ್ಥಿಗೆ ಪ್ರತಿ ಪರೀಕ್ಷೆ/ತರಬೇತಿ ಕೇಂದ್ರದಲ್ಲಿ ಸಿದ್ಧಾಂತದ ಭಾಗಕ್ಕಾಗಿ ವಿಶಿಷ್ಟ ಪ್ರಶ್ನೆಪತ್ರಿಕೆಗಳನ್ನು ರಚಿಸುತ್ತವೆ (ಕೆಳಗಿನ ಮೌಲ್ಯಮಾಪನ ಮಾನದಂಡಗಳ ಪ್ರಕಾರ) |
| 4 | ಈ ಮಾನದಂಡದ ಆಧಾರದ ಮೇಲೆ ಪ್ರತಿ ಪರೀಕ್ಷೆ/ತರಬೇತಿ ಕೇಂದ್ರದಲ್ಲಿ ಪ್ರತಿ ವಿದ್ಯಾರ್ಥಿಗೆ ವೈಯಕ್ತಿಕ ಮೌಲ್ಯಮಾಪನ ಏಜೆನ್ಸಿಗಳು ಕೌಶಲ್ಯಕ್ಕಾಗಿ ಅನನ್ಯ ಮೌಲ್ಯಮಾಪನಗಳನ್ನು ರಚಿಸುತ್ತವೆ. |
| 5 | ಅರ್ಹತಾ (ಕ್ವಾಲಿಫಿಕೇಷನ್) ಪ್ಯಾಕ್ ಅನ್ನು ಪಾಸು ಮಾಡಲು,<br>ತರಬೇತಿ ಪಡೆಯುವ ಅಭ್ಯರ್ಥಿಗಳು (ಟ್ರೈನಿ) ಪ್ರತಿ NOS ನಲ್ಲಿ ಕನಿಷ್ಠ 40% ಶೇಕಡಾವಾರು ಅಂಕ ಗಳಿಸಬೇಕು<br>ಒಟ್ಟಾರೆ 50% ಶೇಕಡಾವಾರು ಅಂಕ ಗಳಿಸಿದರೆ ಮಾತ್ರ ಉತ್ತೀರ್ಣರಾಗುತ್ತಾರೆ. |
| 6 | ನಿರ್ದಿಷ್ಟ ಸಂಖ್ಯೆಯ NOS ಗಳನ್ನು ಮಾತ್ರ ಯಶಸ್ವಿಯಾಗಿ ಪಾಸು ಮಾಡಿದ್ದಲ್ಲಿ, ಅರ್ಹತಾ ಪ್ಯಾಕ್ ಅನ್ನು ಪಾಸ್ ಮಾಡಲು ಉಳಿದ NOS ಗಳ ಮುಂದಿನ ಮೌಲ್ಯಮಾಪನವನ್ನು ತೆಗೆದುಕೊಳ್ಳಲು ಟ್ರೈನಿಯು ಅರ್ಹನಾಗಿರುತ್ತಾನೆ. |

| NOS | ಕಾರ್ಯಕ್ಷಮತೆಯ ಮಾನದಂಡಗಳು | ಒಟ್ಟು ಅಂಕಗಳು | ಅಂಕಗಳ ಹಂಚಿಕೆ | | |
|---|---|---|---|---|---|
| | | | ಒಟ್ಟು | ಸಿದ್ಧಾಂತ (ಥಿಯರಿ) | ಕೌಶಲ್ಯಗಳು |
| LSC/N1123 (ಟ್ರ್ಯಾಕಿಂಗ್ ಮಾಡಲು ಸಜ್ಜಾಗುವುದು) | PC1. ಮೇಲ್ವಿಚಾರಕರಿಂದ ಕಾರ್ಯ ವೇಳಾಪಟ್ಟಿಯನ್ನು ಸ್ವೀಕರಿಸುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಗ್ರಾಹಕ / ಕಂಪನಿ ಕಡೆಯಿಂದ / ಮೇಲ್ವಿಚಾರಕರಿಂದ ಪಟ್ಟಿಯನ್ನು ಪಡೆದುಕೊಳ್ಳುವುದು. | | 20 | 5 | 15 |
| | PC2. ಯಾವುದೇ ರೀತಿಯ ಮುದ್ರಣ ದೋಷಗಳು ಅಥವಾ ಇತರೆ ದೋಷಗಳಿಗಾಗಿ ದಾಖಲೆಗಳನ್ನು ಪರಿಶೀಲಿಸಿ ಮತ್ತು ಯಾವುದೇ ವ್ಯತ್ಯಾಸಗಳಿದ್ದಲ್ಲಿ ಮೇಲ್ವಿಚಾರಕರಿಗೆ ತಿಳಿಸುವುದು. | | 20 | 5 | 15 |
| | PC3.ಅಗತ್ಯವಿದ್ದಲ್ಲಿ ವಸ್ತುಗಳನ್ನು ತೆಗೆದುಕೊಳ್ಳಲು ಆಡಳಿತ ಸಿಬ್ಬಂದಿಯ ಸಹಾಯದಿಂದ ಅಥವಾ ಮೇಲ್ವಿಚಾರಕರಿಂದ ಲೇಬಲ್‌ಗಳನ್ನು (ಮುದ್ರಿತ ಅಥವಾ ಕೈಬರಹ) ಪಡೆದುಕೊಳ್ಳುವುದು. | | 15 | 5 | 10 |
| | PC4. ಸ್ವೀಕರಿಸಿದ ಎಲ್ಲಾ ಲೇಬಲ್‌ಗಳು ಬೇಕಾಗಿರುವ ವಸ್ತುಗಳ ಪಟ್ಟಿಯಲ್ಲಿರುವ ಐಟಂಗಳೊಂದಿಗೆ ಹೊಂದಿಕೆಯಾಗುತ್ತವೆಯೇ ಎಂದು ಪರಿಶೀಲಿಸಿ ಮತ್ತು ಯಾವುದಾದರೂ ದೋಷಗಳು/ ಬದಲಾವಣೆಗಳು ಕಂಡುಬಂದರೆ ಮೇಲ್ವಿಚಾರಕರಿಗೆ ತಿಳಿಸುವುದು. | | 15 | 5 | 10 |
| | PC5. ಬೆಂಕಿಯ ಅಪಾಯಗಳು (ಫೈರ್ ಹಜಾರ್ಡ್), ಜೈವಿಕ ಅಪಾಯಗಳು (ಬಯೋ ಹಜಾರ್ಡ್), ಇತ್ಯಾದಿಗಳ ಸಂದರ್ಭದಲ್ಲಿ ಸುರಕ್ಷತಾ ನಿಯಮಗಳು ಮತ್ತು ಕಾರ್ಯವಿಧಾನಗಳನ್ನು ಅನುಸರಿಸುವುದು. | | 10 | 5 | 5 |
| | PC6. ರಕ್ಷಣಾತ್ಮಕ ಸಾಧನಗಳು, ಹೆಲ್ಮೆಟ್ ಸೇರಿದಂತೆ ಎಲ್ಲಾ ಸುರಕ್ಷತಾ ಸಾಧನಗಳನ್ನು ಧರಿಸುವುದು | 100 | 5 | 2 | 3 |
| | PC7. ಅಗತ್ಯವಿದ್ದಲ್ಲಿ ಮಾಹಿತಿಯನ್ನು ತ್ವರಿತವಾಗಿ ಬರೆದಿಡಲು ಪೇಪರ್, ಪೆನ್ನುಗಳು ಮುಂತಾದ ಯಾವುದೇ ಲೇಖನ ಸಾಮಗ್ರಿಗಳು ಲಭ್ಯವಿವೆಯೇ ಎಂದು ಖಚಿತಪಡಿಸಿಕೊಳ್ಳುವುದು | | 10 | 2 | 8 |
| | PC8. ಟ್ರಕ್ಕಿಂಗ್ ಕಂಪನಿಗಳ, ಚೆಕ್ ಪೋಸ್ಟ್‌ಗಳ, ಸ್ಥಳೀಯ ಅಧಿಕಾರಿಗಳ ಸಂಪರ್ಕ ವಿವರಗಳು ಇತ್ಯಾದಿಗಳ ಪಟ್ಟಿಯನ್ನು ನಿಮ್ಮ ಸುಲಭ ಉಲ್ಲೇಖಕ್ಕಾಗಿ ಸಿದ್ಧಪಡಿಸಿ. | | 11 | 2 | 9 |
| | PC9 ಯಾವುದೇ ಸಮಸ್ಯೆಗಳಿದ್ದರೆ ಕೆಲಸವನ್ನು ಪ್ರಾರಂಭಿಸುವ ಮೊದಲು ಅವುಗಳನ್ನು ಪರಿಹರಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಿ | | 10 | 2 | 8 |
| | | ಒಟ್ಟು | **100** | **20** | **80** |
| LSC/N1124 (ಸರಕು ರವಾನೆ ಟ್ರ್ಯಾಕಿಂಗ್ ನಿರ್ವಹಿಸುವುದು) | PC1. L R ನಲ್ಲಿ ನೀಡಲಾದ ವಿವರಗಳನ್ನು ಬಳಸಿ ಮತ್ತು ವ್ಯವಸ್ಥೆಯನ್ನು ಬಳಸಿ ಪ್ರತಿ ಸರಕನ್ನು ಪರಿಶೀಲಿಸುವುದು. | | 9 | 3 | 6 |
| | PC2. ಸಿಸ್ಟಂ ನಲ್ಲಿ ನಿರ್ದಿಷ್ಟಪಡಿಸಿದಂತೆ ಲಾರಿ ಸರಿಯಾದ ಮಾರ್ಗದಲ್ಲಿದೆಯೇ ಎಂದು ಪರಿಶೀಲಿಸಿ. | | 8 | 2 | 6 |
| | PC3. ಟ್ರಕ್ ಸಾಕಷ್ಟು ದೂರವನ್ನು ದಾಟಿದೆಯೇ ಮತ್ತು ಸಮಯಕ್ಕೆ ಸರಿಯಾಗಿ ಗುರಿ ತಲುಪುತ್ತದೆಯೇ ಎಂದು ನಿರ್ಧರಿಸಿ. | | 5 | 2 | 3 |
| | PC4. ಸಿಸ್ಟಂನಲ್ಲಿ ಸರಕುಗಳಿಗೆ ಯಾವುದೇ ಮಾರ್ಗ ಬದಲಾವಣೆಗಳಿವೆಯೇ ಎಂದು ಕಂಡುಕೊಳ್ಳಿ ಮತ್ತು ಅದನ್ನು ಚಾಲಕರ ಗಮನಕ್ಕೆ ತರುವುದು. | | 4 | 1 | 3 |
| | PC5. ಸಿಸ್ಟಂನಲ್ಲಿ ದಾಖಲಾದ ಯಾವುದೇ ಟ್ರಕ್ ನ ತೊಂದರೆಗಳು /ಸಮಸ್ಯೆಗಳು/ವಿಳಂಬಗಳ ವರದಿ ಗುರುತಿಸಿ ಮತ್ತು ಬರೆದಿಟ್ಟುಕೊಳ್ಳುವುದು. | | 5 | 2 | 3 |
| | PC6 ಯಾವುದೇ ಮಾಹಿತಿಯನ್ನು ವರದಿ ಮಾಡದ ಲಾರಿಗಳನ್ನು ಗಮನಿಸಿ ಮತ್ತು ಸಿಸ್ಟಂನಲ್ಲಿ ಅದರ ಬಗ್ಗೆ ಫ್ಲಾಗ್ ಮಾಡುವುದು. | | 6 | 2 | 4 |
| | PC7 ಯಾವುದೇ ಮಾಹಿತಿಯನ್ನು ವರದಿ ಮಾಡದ ಲಾರಿಗಳ ಚಾಲಕರಿಗೆ ಕರೆ ಮಾಡುವುದು. | | 11 | 2 | 9 |

| NOS | ಕಾರ್ಯಕ್ಷಮತೆಯ ಮಾನದಂಡಗಳು | ಒಟ್ಟು ಅಂಕಗಳು | ಅಂಕಗಳ ಹಂಚಿಕೆ | | |
|---|---|---|---|---|---|
| | | | ಒಟ್ಟು | ಸಿದ್ಧಾಂತ (ಥಿಯರಿ) | ಕೌಶಲ್ಯಗಳು |
| | PC9. ಚೆಕ್ ಪೋಸ್ಟ್ ಅಧಿಕಾರಿಗಳು ಮತ್ತು ಸಾರಿಗೆ ಅಧಿಕಾರಿಗಳೊಂದಿಗೆ ಪರಿಶೀಲಿಸಿ, ಟ್ರಕ್ ಚೆಕ್ ಪೋಸ್ಟ್ ಮೂಲಕ ಹಾದು ಹೋಗಿದೆಯೇ ಮತ್ತು ಯಾವಾಗ ಹೋಗಿದೆ ಎಂದು ಪರಿಶೀಲಿಸುವುದು. | | 8 | 2 | 6 |
| | PC10. ಕೇಳಿ ಪಡೆದ ಯಾವುದೇ ಮಾಹಿತಿಯನ್ನು ಗಮನಿಸುವುದು | | 6 | 2 | 4 |
| | PC11. ವಿಳಂಬ ಅಥವಾ ಸಮಸ್ಯೆಗಳನ್ನು ವರದಿ ಮಾಡಿದ ಲಾರಿಗಳ ಚಾಲಕರನ್ನು ಕರೆ ಮಾಡಿ ಕಾರಣವನ್ನು ಅರ್ಥಮಾಡಿಕೊಳ್ಳುವುದು. | | 6 | 2 | 4 |
| | PC12. ಇದು ಸಾಮಾನ್ಯ ಕಾರಣವಾದರೆ (ಫ್ಲಾಟ್ ಟೈರ್ (ಪಂಕ್ಚರ್), ಇಂಧನ ಕೊರತೆ ಇತ್ಯಾದಿ), ಪ್ರಯಾಣವು ●ಯಾವಾಗ ಪುನರಾರಂಭಗೊಳ್ಳುತ್ತದೆ ಎಂಬುದನ್ನು ಕಂಡುಕೊಳ್ಳಿ ಮತ್ತು ಅದನ್ನು ಗಮನಿಸುವುದು. | | 6 | 2 | 4 |
| | PC13. ಚಾಲಕನಿಗೆ ನಿರ್ವಹಿಸಲು ಸಾಧ್ಯವಾಗದ ಯಾವುದೇ ತಾಂತ್ರಿಕ ಸಮಸ್ಯೆ ಇದ್ದರೆ, ಹತ್ತಿರದ ತಾಂತ್ರಿಕ ಸೇವಾ ಪೂರೈಕೆದಾರರು ನೆರವು ನೀಡುವಂತೆ ವ್ಯವಸ್ಥೆ ಮಾಡುವುದು. | | 5 | 1 | 4 |
| | PC14. ಸರಕು ದಾಖಲೆ ಪತ್ರ ಸಮಸ್ಯೆಗಳು ಅಥವಾ ಅಪಘಾತಗಳಂತಹ ಯಾವುದೇ ಇತರ ಕಾರಣಗಳಿದ್ದರೆ, ಅದನ್ನು ಸಾರಿಗೆ ಸಂಯೋಜಕರಿಗೆ ಅಥವಾ ಸಾರಿಗೆ ವ್ಯವಸ್ಥಾಪಕರಿಗೆ ತುರ್ತಾಗಿ ತಿಳಿಯಪಡಿಸುವುದು. | 100 | 6 | 2 | 4 |
| | PC15. ಮಾರ್ಗ ಬದಲಾವಣೆಗಳು/ವಿಶೇಷ ಹವಾಮಾನ ಪರಿಸ್ಥಿತಿಗಳು ಯಾವುದಾದರೂ ಇದ್ದರೆ ಚಾಲಕರಿಗೆ ನೆನಪಿಸಿ ಮತ್ತು ಅವರಿಗೆ ಅದರ ಬಗ್ಗೆ ತಿಳಿದಿದೆಯೇ ಎಂದು ಖಚಿತಪಡಿಸಿಕೊಳ್ಳಿ. | | 5 | 2 | 3 |
| | PC16. ಲಾರಿಯು ವಿಳಂಬವಾಗಿ ಸೇರುತ್ತದೆ ಎಂದಾದಲ್ಲಿ ತಡ ಮಾಡದೆ ಅದನ್ನು ಸಾರಿಗೆ ವ್ಯವಸ್ಥಾಪಕ / ಔಟ್ ಬೌಂಡ್ ತಂಡ / ಸಂಬಂದಪಟ್ಟ ಗ್ರಾಹಕರಿಗೆ ಮಾಹಿತಿ ಮುಟ್ಟಿಸುವುದು. | | 2 | 1 | 1 |
| | | ಒಟ್ಟು | **100** | **30** | **70** |
| LSC/N1125 (ಟ್ರ್ಯಾಕಿಂಗ್ ನಂತರದ ಚಟುವಟಿಕೆಗಳನ್ನು ನಿರ್ವಹಿಸುವುದು). | PC1. ಪ್ರತಿ ಸರಕಿನ ಡೆಲಿವರಿ ಸ್ಥಳ, ವಿಳಂಬಕ್ಕೆ ಕಾರಣಗಳು ಮತ್ತು ಇತರ ಸಮಸ್ಯೆಗಳನ್ನು ಸಿಸ್ಟಮ್ ನಲ್ಲಿ ನಮೂದಿಸುವುದು. | | 6 | 2 | 4 |
| | PC2. ಪ್ರಗತಿಯನ್ನು ಆಧರಿಸಿ ನಿರೀಕ್ಷಿತ ಆಗಮನದ ಸಮಯವನ್ನು ನವೀಕರಿಸುವುದು. | | 8 | 2 | 6 |
| | PC3. ತಾಂತ್ರಿಕ ಬೆಂಬಲ ಪೂರೈಕೆದಾರರು ಟ್ರಕ್ ಅನ್ನು ತಲುಪುತ್ತಾರೆ ಮತ್ತು ಸೇವೆಯನ್ನು ಒದಗಿಸುತ್ತಾರೆ ಎಂದು ಖಚಿತಪಡಿಸಿಕೊಳ್ಳಿ. | | 8 | 1 | 7 |
| | PC4.ಸಮಸ್ಯೆಗಳನ್ನು ಪರಿಹರಿಸಲಾಗಿದೆಯೇ ಮತ್ತು ಪ್ರಯಾಣವನ್ನು ಪುನರಾರಂಭಿಸಲಾಗಿದೆಯೇ ಎಂದು ಕಂಡುಹಿಡಿಯಲು ನಿಯಮಿತ ಮಧ್ಯಂತರಗಳಲ್ಲಿ ಚಾಲಕರಿಗೆ ಕರೆ ಮಾಡಿ ಪರಿಶೀಲಿಸಿ. | | 7 | 2 | 5 |
| | PC5. ವ್ಯವಸ್ಥೆಯಲ್ಲಿನ ಮಾಹಿತಿಯನ್ನು ನಿಯಮಿತ ಅವಧಿಯಲ್ಲಿ ನವೀಕರಿಸುವುದು | | 6 | 1 | 5 |
| | PC6. ಪ್ರಗತಿ ವರದಿ ಮಾಡದ ಎಲ್ಲಾ ಸ್ಥಿತಿ ಸೂಚಕ (ಫ್ಲ್ಯಾಗ್) ಮಾಡಿದ ಸರಕುಗಳನ್ನು ಅನುಸರಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಿ. | 100 | 7 | 1 | 6 |
| | PC7.ಯಾವುದೇ ಸರಕನ್ನು ಕರೆ ಮೂಲಕ ಅಥವಾ ಅಧಿಕಾರಿಗಳಿಂದ ಟ್ರ್ಯಾಕ್ ಮಾಡಲು ಸಾಧ್ಯವಾಗದಿದ್ದರೆ, ಅದನ್ನು ಸಾರಿಗೆ ವ್ಯವಸ್ಥಾಪಕರಿಗೆ ತಿಳಿಯಪಡಿಸುವುದು. | | 7 | 1 | 6 |
| | PC8. ಡೆಲಿವರಿ ಆರ್ಡರ್ ತನ್ನ ಗಮ್ಯಸ್ಥಾನವನ್ನು ತಲುಪಿದ್ದರೆ ಅದನ್ನು ಸಿಸ್ಟಮ್ ನಲ್ಲಿ ಸೂಕ್ತವಾಗಿ ಮುಕ್ತಾಯ ಮಾಡುವುದು. | | 7 | 2 | 5 |
| | PC9. ಯಾವುದೇ ವಿಳಂಬ, ಇತರ ಅಧಿಕಾರಿಗಳೊಂದಿಗಿನ ಸಮಸ್ಯೆಗಳು ಇತ್ಯಾದಿಗಳ ಬಗ್ಗೆ ಸಾರಿಗೆ ವ್ಯವಸ್ಥಾಪಕರಿಗೆ ತಿಳಿಸುವುದು. | | 7 | 1 | 6 |

| NOS | ಕಾರ್ಯಕ್ಷಮತೆಯ ಮಾನದಂಡಗಳು | ಒಟ್ಟು ಅಂಕಗಳು | ಅಂಕಗಳ ಹಂಚಿಕೆ | | |
|---|---|---|---|---|---|
| | | | ಒಟ್ಟು | ಸಿದ್ಧಾಂತ (ಥಿಯರಿ) | ಕೌಶಲ್ಯಗಳು |
| | PC10. ಚಾಲಕರನ್ನು ಸಂಪರ್ಕಿಸುವಲ್ಲಿ ಎದುರಾಗುವ ಯಾವುದೇ ಸಮಸ್ಯೆಗಳನ್ನು ಅಥವಾ ಪಾಳಿ (ಶಿಫ್ಟ್) ಸಮಯದಲ್ಲಿ ನಿರ್ದಿಷ್ಟ ಸರಕನ್ನು ಪತ್ತೆ ಮಾಡಲು ತೊಂದರೆ ಕಂಡುಬಂದರೆ ವರದಿ ಮಾಡುವುದು. | | 7 | 1 | 6 |
| | PC11. ತೊಂದರೆ ಎದುರಿಸುವ ಕೆಲವು ಮಾರ್ಗಗಳು, ವಿಳಂಬಕ್ಕೆ ಕಾರಣಗಳು ಇತ್ಯಾದಿಗಳ ಕುರಿತು ವರದಿಗಳನ್ನು ತಯಾರಿಸುವುದು. | | 7 | 1 | 6 |
| | PC12. ಎಲ್ಲಾ ದತ್ತಾಂಶವನ್ನು (ಡೇಟಾ) ಉಳಿಸಲು, ಸುರಕ್ಷಿತವಾಗಿ ಲಾಗ್ ಆಫ್ ಮಾಡಿ ಮತ್ತು ಕಂಪ್ಯೂಟರ್ ಅನ್ನು ಸ್ವಿಚ್ ಆಫ್ ಮಾಡುವುದು. | | 6 | 2 | 4 |
| | PC13. ಯಾವುದೇ ಅನಗತ್ಯ ದಾಖಲೆಗಳು ಅಥವಾ ಪೇಪರ್‌ಗಳನ್ನು ವಿಲೇವಾರಿ ಮಾಡುವುದು | | 6 | 1 | 5 |
| | PC14. ಪಾಳಿ (ಶಿಫ್ಟ್) ಹಸ್ತಾಂತರಕ್ಕಾಗಿ ಕೆಲಸದ ಪ್ರದೇಶವನ್ನು ಸ್ವಚ್ಛಗೊಳಿಸಿವುದು. | | 4 | 1 | 3 |
| | PC15. ಶಿಫ್ಟ್‌ನ ಪ್ರಮುಖ ಘಟನಾವಳಿಗಳು ಮತ್ತು ಮುಂದಿನ ಶಿಫ್ಟ್‌ನಲ್ಲಿ ಮಾಡಬೇಕಾದ ಕೆಲಸದ ಬಗ್ಗೆ ಬದಲಿ ಸರಕು ಟ್ರ್ಯಾಕಿಂಗ್ ಕಾರ್ಯನಿರ್ವಾಹಕ ಉದ್ಯೋಗಿಗೆ (ರಿಲಿವರ್) ಸಂಕ್ಷಿಪ್ತವಾಗಿ ತಿಳಿಸಿ. | | 7 | 1 | 6 |
| | | ಒಟ್ಟು | **100** | **20** | **80** |
| **LSC/N1130** ಸರಕು ಸಾಗಣೆಗಳನ್ನು ಟ್ರ್ಯಾಕ್ ಮಾಡುವಾಗ ಆರೋಗ್ಯ,ಸುರಕ್ಷತೆ ಮತ್ತು ಭದ್ರತಾ ಕ್ರಮಗಳನ್ನು ನಿರ್ವಹಿಸುವುದು | PC1. ಕಂಪನಿಯ ನೀತಿಯ ಪ್ರಕಾರ ಎಲ್ಲಾ ಭದ್ರತಾ ಕಾರ್ಯವಿಧಾನಗಳನ್ನು ಅನುಸರಿಸುವುದು. | 100 | 10 | 3 | 7 |
| | PC2. ಎಲ್ಲಾ ಮುನ್ನೆಚ್ಚರಿಕೆಯ ದತ್ತಾಂಶ (ಡೇಟಾ) ನಿರ್ವಹಣೆ ಪ್ರಕ್ರಿಯೆಗಳನ್ನು ಅನುಸರಿಸುವುದು. | | 10 | 3 | 7 |
| | PC3. ಕೆಲಸದ ಪ್ರದೇಶವನ್ನು ಮತ್ತು ಮೇಜನ್ನು ಸದಾ ಸ್ವಚ್ಛವಾಗಿ ಇರುವಂತೆ ನಿರ್ವಹಿಸುವುದು. | | 10 | 3 | 7 |
| | PC4. ಎಲ್ಲಾ ವ್ಯವಹಾರಗಳಲ್ಲಿ (ದತ್ತಾಂಶ) ಡೇಟಾ ಗೌಪ್ಯತೆ ಮತ್ತು ಸ್ವಾತಂತ್ರ್ಯವನ್ನು ಖಚಿತಪಡಿಸಕೊಳ್ಳುವುದು | | 10 | 3 | 7 |
| | PC5. ಅಸುರಕ್ಷಿತ ಪರಿಸ್ಥಿತಿಗಳು ಮತ್ತು ಅಭ್ಯಾಸಗಳನ್ನು ಗುರುತಿಸಿ ಮತ್ತು ವರದಿ ಮಾಡುವುದು. | | 10 | 3 | 7 |
| | PC6.ಯಾವುದೇ ತುರ್ತು ಪರಿಸ್ಥಿತಿ ಅಥವಾ ಅಪಘಾತ / ಸುರಕ್ಷತೆಯ ಉಲ್ಲಂಘನೆಯ ಲಕ್ಷಣಗಳಿದ್ದರೆ ತಕ್ಷಣವೇ ಕ್ರಮ ಕೈಗೊಳ್ಳಲು ಸಂಸ್ಥೆಯ ಶಿಷ್ಟಾಚಾರ ನಿಯಮಾವಳಿಗಳನ್ನು (ಪ್ರೋಟೋಕಾಲ್) ಅನುಸರಿಸುವುದು | | 10 | 3 | 7 |
| | PC7. ಘಟನೆ ಸಂಭವಿಸುವ ಕಾರಣಗಳನ್ನು ಗುರುತಿಸುವುದು. | | 10 | 3 | 7 |
| | PC8 ಕಾರಣಗಳನ್ನು ಸೆರೆಹಿಡಿಯುವುದು ಮತ್ತು ಪ್ರತಿಕ್ರಿಯಿಸುವುದು /ಕ್ರಮವನ್ನು ವರದಿ ಮಾಡುವುದು/ಮ್ಯಾನೇಜರ್ ಗಮನಕ್ಕೆ ತರುವುದು | | 10 | 3 | 7 |
| | PC9. ಪ್ರಮಾಣಿತ ಶಿಷ್ಟಾಚಾರ ನಿಯಮಾವಳಿಗಳ (ಪ್ರೋಟೋಕಾಲ್) ಉಲ್ಲಂಘನೆ ಆಗಿದ್ದರೆ ಕಾರಣಗಳೊಂದಿಗೆ ವರದಿ ಮಾಡುವುದು. (ಇದ್ದರೆ ಮಾತ್ರ) | | 10 | 3 | 7 |
| | PC10 ಸೂಕ್ತ ಮತ್ತು ಸುರಕ್ಷಿತ ಸ್ಥಿತಿಗಾಗಿ ಚಟುವಟಿಕೆಗಳ ಪ್ರದೇಶ ಮತ್ತು ಸಲಕರಣೆಗಳ ದೃಷ್ಟಿ ಪರೀಕ್ಷಿಸುವುದು. | | 10 | 3 | 7 |
| | | ಒಟ್ಟು | **100** | **30** | **70** |

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ

ಡೈರಿ ಸರ್ಕಲ್, ಬನ್ನೇರುಘಟ್ಟ ಮುಖ್ಯ ರಸ್ತೆ,
ಹೊಂಬೇಗೌಡ ನಗರ, ಬೆಂಗಳೂರು-560029
ಅಧಿಕೃತ ಜಾಲತಾಣ : www.kaushalkar.com